ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾಯೋಜನೆ
C/o . ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ,
ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.

ಸಂ.ಕರಾಮರಯೋ/ಸಾರಾ/ನೋಂ-15/2020-21 ದಿನಾಂಕ:29.08.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016ರ ನಿಯಮ 29ರ ಅನ್ವಯ ಮಕ್ಕಳ ಪಾಲನಾ ಸಂಸ್ಥೆಗಳನ್ನು ಲಿಂಗವಾರು ಹಾಗೂ ವಯೋ ಗುಂಪಿನವಾರು ಪ್ರತ್ಯೇಕವಾಗಿ ನಿರ್ವಹಿಸುವುದು ಕಡ್ಡಾಯವಾಗಿದ್ದು, ಅದರಂತೆ ನೋಂದಣಿ/ನವೀಕರಣ ಪ್ರಮಾಣ ಪತ್ರಗಳನ್ನು ಪಡೆಯುವುದರ ಕುರಿತು ನಿರ್ದೇಶನಗಳನ್ನು ನೀಡುವ ಬಗ್ಗೆ.

ಉಲ್ಲೇಖ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016 ಮತ್ತು ಐಸಿಪಿಎಸ್‌ನ ಪರಿಷ್ಕೃತ ಮಾರ್ಗಸೂಚಿ 2016.

*****

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016ರ ನಿಯಮ 29ರ ಅನ್ವಯ ಮಕ್ಕಳ ಪಾಲನಾ ಸಂಸ್ಥೆಗಳನ್ನು ಲಿಂಗವಾರು ಹಾಗೂ ವಯೋ ಗುಂಪಿನವಾರು ಪ್ರತ್ಯೇಕವಾಗಿ ನಿರ್ವಹಿಸುವುದು ಕಡ್ಡಾಯವಾಗಿದ್ದು, ಅದರಂತೆ ನೋಂದಣಿ/ನವೀಕರಣ ಪ್ರಮಾಣ ಪತ್ರಗಳನ್ನು ಪಡೆಯುವುದರ ಕುರಿತು ನಿರ್ದೇಶನಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ ಸುತ್ತೋಲೆಯಲ್ಲಿ ನೀಡಲಾಗಿದೆ. ಸದರಿ ಸುತ್ತೋಲೆಯ ನಿರ್ದೇಶನಗಳನ್ನು ಸಕಾಲದಲ್ಲಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,
29.08.2020
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾಯೋಜನೆ,
ಬೆಂಗಳೂರು.

ಪ್ರತಿಯನ್ನು:-

1. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಮೇಲ್ವಿಚಾರಣೆಗಾಗಿ.
2. ಎಲ್ಲಾ ಬಾಲನ್ಯಾಯ ಮಂಡಳಿಗಳಿಗೆ ಮಾಹಿತಿಗಾಗಿ(ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮುಖಾಂತರ)
3. ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಮಾಹಿತಿ ಹಾಗೂ ಅವಶ್ಯಕ ಕ್ರಮಕ್ಕಾಗಿ(ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮುಖಾಂತರ)
4. ಎಲ್ಲಾ ಜಿಲ್ಲೆಯ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ(ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಮುಖಾಂತರ)



Scanned with CamScanner

ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾಯೋಜನೆ

ಸಂ.ಕರಾಮರಯೋ/ಸಾರಾ/ನೋಂ-15/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:29.08.2020

**ಸುತ್ತೋಲೆ**

ವಿಷಯ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016ರ ನಿಯಮ 29ರ ಅನ್ವಯ ಮಕ್ಕಳ ಪಾಲನಾ ಸಂಸ್ಥೆಗಳನ್ನು ಲಿಂಗವಾರು ಹಾಗೂ ವಯೋ ಗುಂಪಿನವಾರು ಪ್ರತ್ಯೇಕವಾಗಿ ನಿರ್ವಹಿಸುವುದು ಕಡ್ಡಾಯವಾಗಿದ್ದು, ಅದರಂತೆ ನೋಂದಣಿ/ನವೀಕರಣ ಪ್ರಮಾಣ ಪತ್ರಗಳನ್ನು ಪಡೆಯುವುದರ ಕುರಿತು ನಿರ್ದೇಶನಗಳನ್ನು ನೀಡುವ ಬಗ್ಗೆ.

ಉಲ್ಲೇಖ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015, ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016 ಮತ್ತು ಐಸಿಪಿಎಸ್‌ನ ಪರಿಷ್ಕೃತ ಮಾರ್ಗಸೂಚಿ 2016.

*****

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳ ನೋಂದಣಿ ಮತ್ತು ನವೀಕರಣದ ಪ್ರಸ್ತಾವನೆಗಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016ರ ಅನ್ವಯ ನಿರ್ದೇಶನಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯಿದೆ, 2015 ಕಲಂ 41 (2) ರಂತೆ ನೋಂದಣಿ ಮಾಡಬಹುದಾದ ಮಕ್ಕಳ ಪಾಲನಾ ಸಂಸ್ಥೆಗಳ ವಿಗಂಡಣೆ ಕೆಳಕಂಡಂತಿರುತ್ತದೆ.

1. ಬಾಲಮಂದಿರ
2. ತೆರೆದ ತಂಗುದಾಣ
3. ವಿಶೇಷ ದತ್ತು ಸಂಸ್ಥೆ
4. ವೀಕ್ಷಣಾಲಯ
5. ಸ್ಪೆಷಲ್ ಹೋಂ
6. ಪ್ಲೇಸ್‌ಆಫ್ ಸೇಫ್ಟಿ

ಮೇಲಿನ ವಿಂಗಡಣೆಯಲ್ಲಿ ವೀಕ್ಷಣಾಲಯ, ಸ್ಪೆಷಲ್ ಹೋಂ ಮತ್ತು ಪ್ಲೇಸ್‌ಆಫ್ ಸೇಫ್ಟಿಗಳಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳನ್ನು ಪ್ರತ್ಯೇಕವಾಗಿ ಇರಿಸುವುದು ಹಾಗೂ ಮಕ್ಕಳನ್ನು ವಯಸ್ಸುವಾರು ಪ್ರತ್ಯೇಕವಾಗಿ ಇರಿಸುವುದರ ಬಗ್ಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016ರ ನಿಯಮ 29 (1) (i), (ii), (iii)ಗಳಲ್ಲಿ ವಿವರಿಸಲಾಗಿದೆ.

ನಿಯಮ 29(1)(i)

**Observation Home (ವೀಕ್ಷಣಾಲಯ):**

a) Separate observation homes for girls and boys;
b) Classification and segregation of children according to their age group preferably 7-11 years, 12-15 years and 16-18 years giving due consideration to physical and mental status and the nature of the offence committed.



Scanned with CamScanner

ಆದಾಗ್ಯೂ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಕುರಿತು ಹೆಚ್ಚಿನ ಕಾಳಜಿ ವಹಿಸುವ ನಿಟ್ಟಿನಲ್ಲಿ ವೀಕ್ಷಣಾಲಯಗಳನ್ನು ಲಿಂಗವಾರು ಅಲ್ಲದೇ ವಯೋ ಗುಂಪಿನವಾರು ಸಹ ವಿಂಗಡಿಸುವುದು ಅವಶ್ಯವಾಗಿರುತ್ತದೆ. ಈ ಬಗ್ಗೆ ಹೆಚ್ಚಿನ ಮಾರ್ಗದರ್ಶನಗಳನ್ನು ಮುಂದಿನ ದಿನಗಳಲ್ಲಿ ಒದಗಿಸಲಾಗುವುದು.

ನಿಯಮ 29(1)(ii)

**Special Home (ಸ್ಪೆಷಲ್ ಹೋಂ):**

a) separate special homes for girls above the age of 10 years and boys in the age groups of 11 to 15 and 16 to 18 years;
b) classification and segregation of children on the basis of age and nature of offences and their mental and physical status.

ನಿಯಮ 29(1)(iii)

**Place Of Safety (ಪ್ಲೇಸ್ಆಫ್ ಸೇಫ್ಟಿ):**

a) for children in the age group of 16 to 18 years alleged to have committed heinous offence pending inquiry;
b) for children in the age group of 16 to 18 years found to be involved in heinous offence upon completion of inquiry;
c) for persons above 18 years alleged to have committed offence when they were below the age of 18 years pending inquiry;
d) for persons above 18 years found to be involved in offence upon completion of inquiry;
e) for children as per the orders of the Board under clause (g) of sub-section (1) of Section 18 of the Act.

ನಿಯಮ 29(1)(ii)(a) ರಂತೆ ಲಿಂಗವಾರು ಹಾಗೂ ವಯೋವಾರು ಪ್ರತ್ಯೇಕ ವಿಶೇಷ ಗೃಹಗಳನ್ನು ನಿರ್ವಹಿಸುವುದು ಅವಶ್ಯಕವಾಗಿರುತ್ತದೆ. ಈಗಾಗಲೇ ವಿಶೇಷ ಗೃಹಗಳಲ್ಲಿ ಲಿಂಗವಾರು ವಿಂಗಡಣೆ ಅನುಷ್ಠಾನವಾಗಿರುತ್ತದೆ. ಉಳಿದಂತೆ ವಯೋ ಗುಂಪಿನವಾರು ವಿಂಗಡಣೆಯನ್ನು ಅನುಷ್ಠಾನಗೊಳಿಸಲು ಪ್ರಸ್ತುತ ಚಾಲ್ತಿಯಲ್ಲಿರುವ ವಿಶೇಷ ಗೃಹದ ನೋಂದಣಿ ಪ್ರಮಾಣ ಪತ್ರಕ್ಕೆ ಆಯ್ಕೆ ಮಾಡಿಕೊಂಡ ವಯೋ ಗುಂಪಿನಂತೆ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಉಳಿದ ವಯೋಗುಂಪಿನ ಮಕ್ಕಳಿಗೆ ಹೊಸ ವಿಶೇಷಗೃಹವನ್ನು ಪ್ರಾರಂಭಿಸಲು ಹೊಸ ನೋಂದಣಿ ಪ್ರಮಾಣ ಪತ್ರ ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸುವುದು.

**Open Shelters (ತೆರೆದ ತಂಗುದಾಣಗಳು):**

ತೆರೆದ ತಂಗುದಾಣಗಳ ಬಗ್ಗೆ ನಿಯಮ 29ರಲ್ಲಿ ಯಾವುದೇ ಉಲ್ಲೇಖವಿರುವುದಿಲ್ಲ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಪರಿಷ್ಕೃತ ಮಾರ್ಗಸೂಚಿಗಳು 2016 ಅಧ್ಯಾಯ 10–ಡಿ ರಲ್ಲಿ ಕೆಳಕಂಡಂತಿರುತ್ತದೆ.

"Shelter Home

i. Separate shelter homes for girls and boys;
ii. Separate shelter homes for girls above the age of 10 years and boys in the age groups of 11 to 15 and 16 to 18 years;"



Scanned with CamScanner

ಮೇಲಿನ ನಿಬಂಧನೆಗಳಿಂದ ತೆರೆದ ತಂಗುದಾಣಗಳಲ್ಲಿ ಕೆಳಕಂಡ ವಿಗಂಡಣೆ ಮಾಡುವುದು ಅವಶ್ಯಕವಾಗಿರುತ್ತದೆ.

1. 7-10 ವರ್ಷದೊಳಗಿನ ಹೆಣ್ಣು ಮಕ್ಕಳ ತೆರೆದ ತಂಗುದಾಣ
2. 11-18 ವರ್ಷದೊಳಗಿನ ಹೆಣ್ಣು ಮಕ್ಕಳ ತೆರೆದ ತಂಗುದಾಣ
3. 7-10 ವರ್ಷದೊಳಗಿನ ಗಂಡು ಮಕ್ಕಳ ತೆರೆದ ತಂಗುದಾಣ
4. 11-15 ವಯೋ ಗುಂಪಿನ ಗಂಡು ಮಕ್ಕಳ ತೆರೆದ ತಂಗುದಾಣ
5. 16-18 ವಯೋ ಗುಂಪಿನ ಗಂಡು ಮಕ್ಕಳ ತೆರೆದ ತಂಗುದಾಣ

ಆದ್ದರಿಂದ, ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ತೆರೆದ ತಂಗುದಾಣಗಳು ಮೇಲಿನ 5 ವಿಂಗಡಣೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು, ಅದರಂತೆ ಅವರ ನೋಂದಣಿ ಪ್ರಮಾಣ ಪತ್ರಕ್ಕೆ ತಿದ್ದುಪಡಿಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. ನಂತರ ಸದರಿ ತೆರೆದ ತಂಗುದಾಣದಲ್ಲಿ ಉಳಿದ ಲಿಂಗ ಮತ್ತು ವಯೋ ಗುಂಪಿನ ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಯಿಂದ ಸೂಕ್ತ ಆದೇಶಗಳನ್ನು ಪಡೆದು ಅವರ ಲಿಂಗ ಮತ್ತು ವಯೋ ಗುಂಪಿಗೆ ಮಾನ್ಯತೆ ಪಡೆದ ಮಕ್ಕಳ ಪಾಲನಾ ಸಂಸ್ಥೆಗಳಿಗೆ ವರ್ಗಾವಣೆ ಮಾಡಿ ಆ ಮಕ್ಕಳಿಗೆ ಪಾಲನೆ ಮತ್ತು ರಕ್ಷಣೆ ಒದಗಿಸುವುದು.

ಒಂದು ವೇಳೆ ಪ್ರಸ್ತುತ ತೆರೆದ ತಂಗುದಾಣಗಳನ್ನು ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮೇಲಿನ 5 ವಿಂಗಡಣೆಗಳಲ್ಲಿ ಒಂದಕ್ಕಿಂತ ಹೆಚ್ಚಿನ ತೆರೆದ ತಂಗುದಾಣಗಳನ್ನು ನಿರ್ವಹಿಸಲು ಇಚ್ಚಿಸಿದ್ದಲ್ಲಿ ಇದಕ್ಕೆ ತಗಲುವ ವೆಚ್ಚವನ್ನು ಸಂಪೂರ್ಣವಾಗಿ ಸ್ವಯಂ ಸೇವಾ ಸಂಸ್ಥೆಯವರೇ ಭರಿಸಬೇಕಾಗುತ್ತದೆ. ಏಕೆಂದರೆ ಕೇಂದ್ರ ಸರ್ಕಾರ ಅನುಮೋದಿಸಿದ್ದು, ಕೇವಲ ಒಂದೇ ತೆರೆದ ತಂಗುದಾಣ ಆಗಿರುವುದರಿಂದ, ಸದರಿ ಸ್ವಯಂ ಸೇವಾ ಸಂಸ್ಥೆಯವರು ಒಂದಕ್ಕಿಂತ ಹೆಚ್ಚಿನ ತೆರೆದ ತಂಗುದಾಣಗಳನ್ನು ನಿರ್ವಹಿಸುವುದಾದಲ್ಲಿ ಪ್ರಸ್ತುತ ಅನುಮೋದನೆಗೊಂಡ ಪ್ರಮಾಣ ಪತ್ರವನ್ನು ಹೊಂದಿದ ತೆರೆದ ತಂಗುದಾಣವನ್ನು ಹೊರತುಪಡಿಸಿ ಉಳಿದ ತೆರೆದ ತಂಗುದಾಣಗಳಿಗೆ ಶೇಕಡಾ 100% ರಷ್ಟು ವೆಚ್ಚವನ್ನು ಸ್ವಯಂ ಸೇವಾ ಸಂಸ್ಥೆಯವರೇ ಭರಿಸಬೇಕಾಗುತ್ತದೆ.

## ಬಾಲಮಂದಿರಗಳು:

### 0-6 ವಯೋ ಗುಂಪಿನ ಮಕ್ಕಳ ಬಗ್ಗೆ:

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015ಕಲಂ 36ರ ಪ್ರಾವಿಜೋದಲ್ಲಿ ಕೆಳಕಂಡಂತಿದೆ.

"all children below six years of age, who are orphan, surrendered or appear to be abandoned shall be placed in a Specialised Adoption Agency, where available"

ಆದ್ದರಿಂದ ಅನಾಥ, ಒಪ್ಪಿಸಲ್ಪಟ್ಟ ಹಾಗೂ ಪರಿತ್ಯಜಿಸಲ್ಪಟ್ಟವರೆಂದು ಭಾವಿಸಬಹುದಾದ ಅಂದರೆ ಒಟ್ಟಾರೆ ದತ್ತು ಪಡೆಯಲು ಅರ್ಹತೆಯನ್ನು ಹೊಂದಬಹುದಾದ ಮಕ್ಕಳನ್ನು ವಿಶೇಷ ದತ್ತು ಸಂಸ್ಥೆಗಳಲ್ಲಿ ಮಾತ್ರ ಇಡುವುದು ಕಡ್ಡಾಯವಾಗಿರುತ್ತದೆ.

0-6 ವಯೋ ಗುಂಪಿನ ಮಕ್ಕಳ ಹಿತದೃಷ್ಟಿಯಿಂದ ಈ ವಯೋ ಗುಂಪಿನಲ್ಲಿರುವಂತಹ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳು ಆದರೆ ದತ್ತು ಪ್ರಕ್ರಿಯೆಗೆ ಒಳಪಡಿಸಲು ಅವಕಾಶವಿಲ್ಲದ ಮಕ್ಕಳನ್ನು **ಸರ್ಕಾರಿ ಸ್ವಾಮ್ಯದ** ಶಿಶುಮಂದಿರಗಳಲ್ಲಿ ಮಾತ್ರ ಇಡುವುದು ಅವಶ್ಯಕವಾಗಿರುತ್ತದೆ.

ಪ್ರಸ್ತುತ ಕರ್ನಾಟಕ ರಾಜ್ಯದ ಬೆಂಗಳೂರು ನಗರ ಜಿಲ್ಲೆಯಲ್ಲಿ ಮಾತ್ರ 0-6 ವಯೋ ಗುಂಪಿನ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ ಸಲುವಾಗಿ ಪ್ರತ್ಯೇಕ ಶಿಶು ಮಂದಿರವನ್ನು **ಸರ್ಕಾರಿ ಸ್ವಾಮ್ಯದಲ್ಲಿ**



Scanned with CamScanner

ನಡೆಸಲಾಗುತ್ತಿದೆ. 0–6 ವಯೋ ಗುಂಪಿನ ಮಕ್ಕಳ ಪಾಲನೆ ಮತ್ತು ರಕ್ಷಣೆಗಾಗಿ ವಿಶೇಷ ಕೌಶಲ್ಯ ಹಾಗೂ ವಿಶೇಷ ಆರೈಕೆಯ ಅಗತ್ಯತೆ ಇರುವುದರಿಂದ ಈಗಾಗಲೇ ವಿಶೇಷ ದತ್ತು ಸಂಸ್ಥೆಗಳನ್ನು ನಡೆಸುತ್ತಿರುವ ಕೇಂದ್ರಗಳಲ್ಲಿಯೇ 0–6 ವಯೋ ಗುಂಪಿನ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳಿಗೂ ಸಹ ಅಲ್ಲಿಯೇ ಶಿಶು ಮಂದಿರಗಳನ್ನು ಸ್ಥಾಪಿಸಿ ಆಶ್ರಯ ಒದಗಿಸುವುದು ಸೂಕ್ತವಾಗಿರುತ್ತದೆ. ಅದರಂತೆ ಪ್ರಸ್ತುತ ರಾಜ್ಯದಲ್ಲಿರುವ ಎಲ್ಲಾ **ಸರ್ಕಾರಿ ಸ್ವಾಮ್ಯದ** ವಿಶೇಷ ದತ್ತು ಸಂಸ್ಥೆಗಳು 0–6 ವಯೋ ಗುಂಪಿನ ಪಾಲನೆ ಮತ್ತು ರಕ್ಷಣೆಯ ಅವಶ್ಯವಿರುವ ಮಕ್ಕಳಿಗೆ ಆಶ್ರಯವನ್ನು ಒದಗಿಸಲು ಅನುವಾಗುವಂತೆ **ಸರ್ಕಾರಿ ಸ್ವಾಮ್ಯದ** ಶಿಶು ಮಂದಿರವನ್ನು ಪ್ರಾರಂಭಿಸಲು ನೋಂದಣಿ ಪ್ರಮಾಣ ಪತ್ರಗಳನ್ನು ಪಡೆಯಲು ಪ್ರಸ್ತಾವನೆಗಳನ್ನು ಸಲ್ಲಿಸಲು ಸೂಚಿಸಿದೆ.

ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ 5 **ಸರ್ಕಾರಿ ಸ್ವಾಮ್ಯದ** ವಿಶೇಷ ದತ್ತು ಸಂಸ್ಥೆಗಳಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಈಗಾಗಲೇ ಸರ್ಕಾರದ ಶಿಶು ಮಂದಿರ ಇರುವುದರಿಂದ ಉಳಿದ 4 ಜಿಲ್ಲೆಯವರು **ಸರ್ಕಾರಿ** ಶಿಶು ಮಂದಿರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುವುದು.

2020–21ನೇ ಸಾಲಿನಲ್ಲಿ ಪ್ರಾಜೆಕ್ಟ್ ಅಪ್ರೂವಲ್ ಬೋರ್ಡ್(ಪಿಎಬಿ), ಕೇಂದ್ರ ಸರ್ಕಾರ ಇವರಿಂದ ಈಗಾಗಲೇ 6 ವಿಶೇಷ ದತ್ತು ಸಂಸ್ಥೆಗಳಿಗೆ ತಾತ್ವಿಕ(In principle) ಅನುಮತಿ ದೊರೆತಿದ್ದು ಮುಂದಿನ ದಿನಗಳಲ್ಲಿ ಈ **ಸರ್ಕಾರದ** ವಿಶೇಷ ದತ್ತು ಸಂಸ್ಥೆಗಳಲ್ಲಿಯೂ ಸಹ **ಸರ್ಕಾರಿ ಸ್ವಾಮ್ಯದ** ಶಿಶು ಮಂದಿರಗಳನ್ನು ಸ್ಥಾಪಿಸಬಹುದಾಗಿದೆ.

ಹೀಗೆ ಮುಂದಿನ ಕೆಲವು ವರ್ಷಗಳಲ್ಲಿ ಹಂತ ಹಂತವಾಗಿ ಎಲ್ಲಾ ಜಿಲ್ಲೆಗಳಲ್ಲಿ **ಸರ್ಕಾರಿ ಸ್ವಾಮ್ಯದ** ವಿಶೇಷ ದತ್ತು ಸಂಸ್ಥೆಗಳು ಹಾಗೂ **ಸರ್ಕಾರಿ ಸ್ವಾಮ್ಯದ** ಶಿಶು ಮಂದಿರಗಳನ್ನು ಸ್ಥಾಪಿಸಲು ಕೇಂದ್ರ ಕಛೇರಿಯಿಂದ ಕ್ರಮ ಕೈಗೊಳ್ಳುವುದು.

ಈ ಸಂಬಂಧಪಟ್ಟ ಹೆಚ್ಚಿನ ಆಚರಣಾತ್ಮಕ ಮಾರ್ಗದರ್ಶನಗಳನ್ನು ಮುಂದಿನ ದಿನಗಳಲ್ಲಿ ಒದಗಿಸಲಾಗುವುದು.

## 7–18 ವಯೋ ಗುಂಪಿನ ಮಕ್ಕಳ ಬಗ್ಗೆ.

**ಮಕ್ಕಳ ಪಾಲನಾ ಸಂಸ್ಥೆಗಳ ನೋಂದಣಿ ಹಾಗೂ ನವೀಕರಣಕ್ಕಾಗಿ ಅನುಸರಿಸಬೇಕಾದ ಕ್ರಮಗಳು:**

1. ಕೇಂದ್ರಕಛೇರಿಗೆ ಈಗಾಗಲೇ ಸಲ್ಲಿಸಲಾದ ಹಲವಾರು ನೋಂದಣಿ ಮತ್ತು ನವೀಕರಣ ಪ್ರಸ್ತಾವನೆಗಳು ಅಸಮರ್ಪಕವಾಗಿದ್ದು, ಇವುಗಳನ್ನು ತಿರಸ್ಕರಿಸಲಾಗಿದ್ದು, ಭವಿಷ್ಯದಲ್ಲಿ ಪ್ರಸ್ತಾವನೆಗಳನ್ನು ಸಮರ್ಪಕವಾಗಿ ಸಲ್ಲಿಸಲು ಸೂಚಿಸಿದೆ.
2. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015 ಕಲಂ 54ರನ್ವಯ ಜಿಲ್ಲಾ ತನಿಖಾ ಸಮಿತಿಯ ಕನಿಷ್ಠ ಮೂರು ಸದಸ್ಯರು ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳಿಗೆ ವಸತಿ ಕಲ್ಪಿಸುವ ಸಂಸ್ಥೆಗಳಿಗೆ ಪರಿಶೀಲನೆಗಾಗಿ ಭೇಟಿ ನೀಡತಕ್ಕದ್ದು ಹಾಗೂ ಈ ಮೂರು ಜನ ಸದಸ್ಯರಲ್ಲಿ ಒಬ್ಬರು ಮಹಿಳೆ ಹಾಗೂ ಒಬ್ಬರು ವೈದ್ಯಾಧಿಕಾರಿ ಕಡ್ಡಾಯವಾಗಿ ಇರತಕ್ಕದ್ದು. ಆದ್ದರಿಂದ, ಈ ರೀತಿ ಸದಸ್ಯರುಗಳಿಲ್ಲದ ಜಿಲ್ಲಾ ತನಿಖಾ ಸಮಿತಿ ವರದಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
3. **ನೋಂದಣಿ ಪ್ರಸ್ತಾವನೆಗಳಿಗೆ ಕೆಳಕಂಡ ದಾಖಲಾತಿಗಳು ಕಡ್ಡಾಯವಾಗಿರುತ್ತವೆ.**
   ಅ) ನಮೂನೆ 27ರಲ್ಲಿ ಅರ್ಜಿ
   ಆ) ನಿಯಮ 21 ಪ್ರಕಾರ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳು.
   ಇ) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ತನಿಖಾ ವರದಿ ಮತ್ತು ತಡೆಪಟ್ಟಿ.
   ಈ) ಸಾಮರ್ಥ್ಯ ನಮೂನೆ.
   ಉ) ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರ ಶಿಫಾರಸ್ಸು.



Scanned with CamScanner

4. <u>ನವೀಕರಣ ಪ್ರಸ್ತಾವನೆಗೆ ಕೆಳಕಂಡ ದಾಖಲಾತಿಗಳು ಕಡ್ಡಾಯವಾಗಿರುತ್ತವೆ.</u>
   ಅ) ನಮೂನೆ 27ರಲ್ಲಿ ಅರ್ಜಿ.
   ಆ) ನಿಯಮ 21 ಪ್ರಕಾರ ಸಲ್ಲಿಸಬೇಕಾದ ಎಲ್ಲಾ ದಾಖಲಾತಿಗಳು.
   ಇ) ಜಿಲ್ಲಾ ತನಿಖಾ ಸಮಿತಿಯ ವರದಿ ನಮೂನೆ 46ರಲ್ಲಿ
   ಉ) ಸಾಮರ್ಥ್ಯ ನಮೂನೆ.
   ಊ) ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರ ಶಿಫಾರಸ್ಸು.

5. ಕೌಮಾರ್ಯಾವಸ್ಥೆ/ಹದಿಹರೆಯದ(Teenage)ವಯಸ್ಸಿನಲ್ಲಿರುವ ಮಕ್ಕಳು ವಿವಿಧ ಜೈವಿಕ ಕಾರಣಗಳಿಂದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಸಣ್ಣ ಮಕ್ಕಳ ಮೇಲೆ ದೈಹಿಕ, ಮಾನಸಿಕ ಹಾಗೂ ಲೈಂಗಿಕ ದಾಳಿ ನಡೆಸುವುದನ್ನು ತಪ್ಪಿಸುವುದು ಅತ್ಯವಶ್ಯಕವಾಗಿದ್ದು, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಮಾದರಿ ನಿಯಮಗಳು, 2016 ನಿಯಮ 29 (1) (iv) (b)ರಲ್ಲಿ ಕೆಳಕಂಡ ನಿಬಂಧನೆಗಳಿರುತ್ತವೆ.
   "separate children's homes for boys and girls in the age group of 7-11 years and 12-18 years;"

6. ಮೇಲಿನ ನಿಯಮದಂತೆ ಕೆಳಕಂಡ ಬಾಲಮಂದಿರಗಳಿರುವುದು ಕಡ್ಡಾಯವಾಗಿರುತ್ತದೆ.
   1. 7–11 ವರ್ಷ ಗಂಡು ಮಕ್ಕಳ ಜ್ಯೂನಿಯರ್ ಬಾಲಕರ ಬಾಲಮಂದಿರ
   2. 12–18 ವರ್ಷ ಗಂಡು ಮಕ್ಕಳ ಸೀನಿಯರ್ ಬಾಲಕರ ಬಾಲಮಂದಿರ
   3. 7–11 ವರ್ಷ ಹೆಣ್ಣು ಮಕ್ಕಳ ಜ್ಯೂನಿಯರ್ ಬಾಲಕಿಯರ ಬಾಲಮಂದಿರ
   4. 12–18 ವರ್ಷ ಹೆಣ್ಣು ಮಕ್ಕಳ ಸೀನಿಯರ್ ಬಾಲಕಿಯರ ಬಾಲಮಂದಿರ

ಈ ನಿಯಮವನ್ನು ಕಲಂ 41(2) ಜೊತೆ ಓದಿದಾಗ ಪ್ರತಿ ಮಕ್ಕಳ ಪಾಲನಾ ಸಂಸ್ಥೆ/ಬಾಲಮಂದಿರಕ್ಕೆ ಪ್ರತ್ಯೇಕವಾಗಿ ನೋಂದಣಿ ಪ್ರಮಾಣ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಅದರಂತೆ ಪ್ರಸ್ತುತ ಯಾವುದಾದರೂ ಬಾಲಮಂದಿರ/ಮಕ್ಕಳ ಪಾಲನಾ ಸಂಸ್ಥೆಗೆ ಈ ಹಿಂದೆ ನೋಂದಣಿ ಪ್ರಮಾಣ ಪತ್ರದಲ್ಲಿ 6–18 ವರ್ಷದ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಅಥವಾ 6–18 ವರ್ಷದ ಗಂಡು ಮಕ್ಕಳು ಅಥವಾ 6–18 ವರ್ಷದ ಹೆಣ್ಣು ಮಕ್ಕಳು ಎಂದು ಪ್ರಮಾಣ ಪತ್ರ ಪಡೆದಿದ್ದಲ್ಲಿ, ಸದರಿಯವರು ಪ್ರಸ್ತುತ ಕೆಳಕಂಡಂತೆ ಕ್ರಮವಹಿಸಬೇಕಾಗಿರುತ್ತದೆ.

ಅ) **<u>ಸರ್ಕಾರದ ಬಾಲಮಂದಿರಗಳು</u>**:– ಸರ್ಕಾರದ ವತಿಯಿಂದ ನಡೆಸಲ್ಪಡುತ್ತಿರುವ ಬಾಲಮಂದಿರಗಳಲ್ಲಿ ಈಗಾಗಲೇ ಲಿಂಗವಾರು ವಿಂಗಡಣೆ ಸಂಪೂರ್ಣವಾಗಿ ಅನುಷ್ಠಾನ ಮಾಡಲಾಗಿರುತ್ತದೆ. ಕೇವಲ ವಯೋ ಗುಂಪಿನವಾರು ವಿಂಗಡಣೆ ಮಾತ್ರ ಬಾಕಿ ಇರುತ್ತದೆ. ಅದರಂತೆ, ಪ್ರಸ್ತುತ ಇರುವ ನೋಂದಣಿ ಪ್ರಮಾಣ ಪತ್ರಕ್ಕೆ ಮೇಲಿನಂತೆ ವಯೋ ಗುಂಪಿನವಾರು ವಿಂಗಡಣೆಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ಅದರಂತೆ ನೋಂದಣಿ ಪ್ರಮಾಣ ಪತ್ರಕ್ಕೆ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಉಳಿದ ವಯೋ ಗುಂಪಿನ ಮಕ್ಕಳಿಗೆ ಹೊಸ ಬಾಲಮಂದಿರಕ್ಕಾಗಿ ಹೊಸ ಪ್ರಮಾಣ ಪತ್ರಕ್ಕಾಗಿ ಪ್ರಸ್ತಾವನೆ ಸಲ್ಲಿಸುವುದು. ಈ ಹೊಸ ಬಾಲಮಂದಿರಗಳಿಗೆ ಮುಂದಿನ ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಅನುಮೋದನೆಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳುವುದು. ಈ ಬಗ್ಗೆ ಆಚರಣಾತ್ಮಕ ವಿವರಗಳಿಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾರ್ಗದರ್ಶನಗಳನ್ನು ಮುಂದಿನ ದಿನಗಳಲ್ಲಿ ಒದಗಿಸಲಾಗುವುದು.

ಆ) **<u>ಸರ್ಕಾರದ ಅನುದಾನ ಪಡೆಯುತ್ತಿರುವ ಬಾಲಮಂದಿರಗಳು</u>**:– ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಪ್ರತೀ ಬಾಲಮಂದಿರವು ಕೆಳಕಂಡ ವಿಂಗಡಣೆಗಳಲ್ಲಿ ಯಾವುದಾದರು ಒಂದು ವಿಂಗಡಣೆಯನ್ನು ಆಯ್ದುಕೊಳ್ಳುವುದು ಹಾಗೂ ಅದರಂತೆ ನೋಂದಣಿ ಪ್ರಮಾಣ ಪತ್ರಕ್ಕೆ ತಿದ್ದುಪಡಿಗಾಗಿ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಕಳುಹಿಸುವುದು.

Scanned with CamScanner

1. 7–11 ವರ್ಷ ಗಂಡು ಮಕ್ಕಳ ಜ್ಯೂನಿಯರ್ ಬಾಲಕರ ಬಾಲಮಂದಿರ
2. 12–18 ವರ್ಷ ಗಂಡು ಮಕ್ಕಳ ಸೀನಿಯರ್ ಬಾಲಕರ ಬಾಲಮಂದಿರ
3. 7–11 ವರ್ಷ ಹೆಣ್ಣು ಮಕ್ಕಳ ಜ್ಯೂನಿಯರ್ ಬಾಲಕಿಯರ ಬಾಲಮಂದಿರ
4. 12–18 ವರ್ಷ ಹೆಣ್ಣು ಮಕ್ಕಳ ಸೀನಿಯರ್ ಬಾಲಕಿಯರ ಬಾಲಮಂದಿರ

ಒಂದು ಸಂಸ್ಥೆಯಲ್ಲಿ ಮೇಲಿನಂತೆ ಆಯ್ದುಕೊಂಡ ನಂತರ ಉಳಿದ ಲಿಂಗವಾರು ಮತ್ತು ವಯೋ ಗುಂಪಿನವಾರು ಮಕ್ಕಳಿಗೆ ಮಕ್ಕಳ ಕಲ್ಯಾಣ ಸಮಿತಿ ವತಿಯಿಂದ ಜಿಲ್ಲೆಯಲ್ಲಿರುವ ಅವರ ಲಿಂಗ ಮತ್ತು ವಯೋ ಗುಂಪಿಗೆ ಮಾನ್ಯತೆ ಪಡೆದ ಬೇರೆ ಮಕ್ಕಳ ಪಾಲನಾ ಸಂಸ್ಥೆಗಳಿಗೆ ವರ್ಗಾವಣೆ ಮಾಡಿ ಸೂಕ್ತ ವ್ಯವಸ್ಥೆ ಕಲ್ಪಿಸತಕ್ಕದ್ದು.

ಸದರಿ ಸಂಸ್ಥೆಯವರು ಮೇಲಿನ ವಿಂಗಡಣೆಯಂತೆ ಒಂದಕ್ಕಿಂತ ಹೆಚ್ಚಿನ ಮಕ್ಕಳ ಪಾಲನಾ ಸಂಸ್ಥೆಗಳನ್ನು ನಿರ್ವಹಿಸಲು ಇಚ್ಛಿಸಿದ್ದಲ್ಲಿ ಅದರಂತೆ, ಹೊಸ ನೋಂದಣಿ ಪ್ರಮಾಣ ಪತ್ರಗಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಬಹುದು, ಆದರೆ ಕೇಂದ್ರ ಸರ್ಕಾರವು ಒಂದು ಸಂಸ್ಥೆಯನ್ನು ಮಾತ್ರ ಅನುಮೋದಿಸಿರುವುದರಿಂದ ಅಂತಹ ಹೊಸ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಯಾವುದೇ ಸರ್ಕಾರದ ಅನುದಾನವನ್ನು ಒದಗಿಸಲಾಗುವುದಿಲ್ಲ.

ಇ) **ಖಾಸಗಿ ಬಾಲಮಂದಿರಗಳು:–** ಒಂದು ವೇಳೆ ಖಾಸಗಿ ಸಂಸ್ಥೆಯವರು ಯಾವುದೇ ಸರ್ಕಾರಿ ಅನುದಾನ ಪಡೆಯದಿದ್ದಲ್ಲಿ ಅಂತಹ ಸಂಸ್ಥೆಯವರು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಲಿಂಗವಾರು ಪ್ರತ್ಯೇಕವಾಗಿ ಹಾಗೂ ವಯಸ್ಸುವಾರು ಪ್ರತ್ಯೇಕವಾಗಿ ಕಟ್ಟಡ/ಕ್ಯಾಂಪಸ್‌ನಲ್ಲಿ ಪ್ರತ್ಯೇಕ ಮೂಲಭೂತ ಸೌಕರ್ಯ ಹಾಗೂ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸಿ ಪ್ರತ್ಯೇಕ ಮಕ್ಕಳ ಪಾಲನಾ ಸಂಸ್ಥೆಗಳನ್ನು ನಿರ್ವಹಿಸಲು ಸಿದ್ಧವಿದ್ದಲ್ಲಿ, ಪ್ರಸ್ತುತವಿರುವ ನೋಂದಣಿ ಪ್ರಮಾಣ ಪತ್ರಕ್ಕೆ ಮೇಲೆ ತಿಳಿಸಿರುವ ಒಂದು ವಿಂಗಡಣೆಯನ್ನು ಆಯ್ಕೆ ಮಾಡಿ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಉಳಿದ ವಿಂಗಡಣೆಗಳ ಮಕ್ಕಳಿಗೆ ಹೊಸ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಹೊಸ ನೋಂದಣಿಗಾಗಿ ಪ್ರಸ್ತಾವನೆಯನ್ನು ಕಳುಹಿಸುವುದು.

ಇಲ್ಲದಿದ್ದಲ್ಲಿ ಮೇಲಿನ ವಿಂಗಡಣೆಯಂತೆ ಮಕ್ಕಳ ಲಿಂಗ ಹಾಗೂ ವಯೋ ಗುಂಪನ್ನು ಆಯ್ಕೆ ಮಾಡಿಕೊಂಡು ಅದರಂತೆ ಪ್ರಸ್ತುತ ಚಾಲ್ತಿಯಲ್ಲಿರುವ ನೋಂದಣಿ ಪ್ರಮಾಣ ಪತ್ರಕ್ಕೆ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸುವುದು. ನಂತರ ಉಳಿದ ಲಿಂಗವಾರು ಮತ್ತು ವಯೋ ಗುಂಪಿನವಾರು ಮಕ್ಕಳಿಗೆ ಮಕ್ಕಳ ಕಲ್ಯಾಣ ಸಮಿತಿ ವತಿಯಿಂದ ಜಿಲ್ಲೆಯಲ್ಲಿರುವ ಅವರ ಲಿಂಗ ಮತ್ತು ವಯೋ ಗುಂಪಿಗೆ ಮಾನ್ಯತೆ ಪಡೆದ ಬೇರೆ ಮಕ್ಕಳ ಪಾಲನಾ ಸಂಸ್ಥೆಗಳಿಗೆ ವರ್ಗಾವಣೆ ಮಾಡಿ ಸೂಕ್ತ ವ್ಯವಸ್ಥೆ ಕಲ್ಪಿಸತಕ್ಕದ್ದು.

**ನಿಯಮ 29ರಂತೆ ಲಿಂಗವಾರು ಹಾಗೂ ವಯೋ ಗುಂಪಿನವಾರು ವಿಂಗಡಣೆಯನ್ನು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಕೈಗೊಳ್ಳಬೇಕಾದ ಆಚರಣಾತ್ಮಕ ಕ್ರಮಗಳು:**

1. ಮೇಲಿನಂತೆ ಲಿಂಗವಾರು ಮತ್ತು ವಯೋ ಗುಂಪಿನವಾರು ಮಕ್ಕಳ ಪಾಲನಾ ಸಂಸ್ಥೆಗಳನ್ನು ಪ್ರತ್ಯೇಕೀಕರಿಸುವ ಕಾರ್ಯವು ಯಾವುದೇ ಅಡಚಣೆ ಇಲ್ಲದೆ ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಅವರವರ ಜಿಲ್ಲೆಯಲ್ಲಿನ ಎಲ್ಲಾ ಸರ್ಕಾರದ ಅನುದಾನ ಪಡೆಯುತ್ತಿರುವ ಹಾಗೂ ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳ ವ್ಯವಸ್ಥಾಪಕರೊಂದಿಗೆ ವಿವರವಾದ ತಿಳುವಳಿಕೆ ಸಭೆಗಳನ್ನು ನಡೆಸುವುದು. ಈ ಸಭೆಗಳಲ್ಲಿ ಸದರಿ ವ್ಯವಸ್ಥಾಪಕರಿಗೆ ಮಕ್ಕಳ ಪಾಲನಾ ಸಂಸ್ಥೆಗಳನ್ನು ಲಿಂಗವಾರು ಮತ್ತು ವಯೋ ಗುಂಪಿನವಾರು ಪ್ರತ್ಯೇಕೀಕರಿಸಿ ಪ್ರತ್ಯೇಕವಾದ ನೋಂದಣಿ ಪ್ರಮಾಣ ಪತ್ರಗಳನ್ನು ಪಡೆಯಬೇಕಾದ ಅತ್ಯಗತ್ಯತೆ ಬಗ್ಗೆ ಹಾಗೂ ಇದರಿಂದ ಮಕ್ಕಳ ಮೇಲೆ ಆಗುವ ದೈಹಿಕ, ಲೈಂಗಿಕ ಮತ್ತು ಮಾನಸಿಕ ದಾಳಿಗಳನ್ನು ತಪ್ಪಿಸಬಹುದೆಂದು ವಿವರಿಸಿ ಮನವರಿಕೆ ಮಾಡುವುದು.

2. ಲಿಂಗವಾರು ಮತ್ತು ವಯೋ ಗುಂಪಿನವಾರು ಮಕ್ಕಳ ಪಾಲನಾ ಸಂಸ್ಥೆಗಳನ್ನು ಪ್ರತ್ಯೇಕೀಕರಿಸುವ ಕಾರ್ಯವು ಯಾವುದೇ ಅಡಚಣೆ ಇಲ್ಲದೆ ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಒಂದು ಉದಾಹರಣೆಯನ್ನು ಕೆಳಕಂಡಂತೆ ನೀಡಲಾಗಿದೆ.



Scanned with CamScanner

**ಉದಾಹರಣೆ:**

ಒಂದು ಜಿಲ್ಲೆಯಲ್ಲಿ ಒಟ್ಟಾರೆ 23 ಮಕ್ಕಳ ಪಾಲನಾ ಸಂಸ್ಥೆಗಳಿವೆ ಎಂದು ಭಾವಿಸೋಣ. ಪ್ರಸ್ತುತ ಸದರಿ 23 ಸಂಸ್ಥೆಗಳ ನೋಂದಣಿ ಪ್ರಮಾಣ ಪತ್ರಗಳು ಕೆಳಕಂಡಂತೆ ಇರಬಹುದು.

| | | |
|---|---|---|
| 6–18 ವಯಸ್ಸಿನ ಗಂಡು ಮತ್ತು ಹೆಣ್ಣು ಮಕ್ಕಳಿಗೆ | | – 8 ಮಕ್ಕಳ ಪಾಲನಾ ಸಂಸ್ಥೆಗಳು |
| 6–18 ವಯಸ್ಸಿನ ಹೆಣ್ಣು ಮಕ್ಕಳು | | – 5 ಮಕ್ಕಳ ಪಾಲನಾ ಸಂಸ್ಥೆಗಳು |
| 6–18 ವಯಸ್ಸಿನ ಗಂಡು ಮಕ್ಕಳು | | –10 ಮಕ್ಕಳ ಪಾಲನಾ ಸಂಸ್ಥೆಗಳು |
| | ಒಟ್ಟು | **–23** ಮಕ್ಕಳ ಪಾಲನಾ ಸಂಸ್ಥೆಗಳು |

ಸದರಿ ಮಕ್ಕಳ ಪಾಲನಾ ಸಂಸ್ಥೆಗಳ ವ್ಯವಸ್ಥಾಪಕರಿಗೆ ಸಭೆಗಳ ಮುಖಾಂತರ ಮನವರಿಕೆ ಮಾಡಿದ ನಂತರ ಅದೇ ಜಿಲ್ಲೆಯಲ್ಲಿ ಅದೇ ಸಂಖ್ಯೆಯ ಮಕ್ಕಳ ಪಾಲನಾ ಸಂಸ್ಥೆಗಳ ನೋಂದಣಿ ಪ್ರಮಾಣ ಪತ್ರಗಳಿಗೆ ತಿದ್ದುಪಡಿ ಮುಖಾಂತರ ಸದರಿ ಸಂಸ್ಥೆಗಳನ್ನು ಕೆಳಕಂಡಂತೆ ಮಾರ್ಪಡಿಸಬಹುದಾಗಿದೆ.

| | | |
|---|---|---|
| 7–11 ವಯಸ್ಸಿನ ಗಂಡು ಮಕ್ಕಳು | | – 7 ಮಕ್ಕಳ ಪಾಲನಾ ಸಂಸ್ಥೆಗಳು |
| 12–18 ವಯಸ್ಸಿನ ಗಂಡು ಮಕ್ಕಳು | | – 9 ಮಕ್ಕಳ ಪಾಲನಾ ಸಂಸ್ಥೆಗಳು |
| 7–11 ವಯಸ್ಸಿನ ಹೆಣ್ಣು ಮಕ್ಕಳು | | – 3 ಮಕ್ಕಳ ಪಾಲನಾ ಸಂಸ್ಥೆಗಳು |
| 12–18 ವಯಸ್ಸಿನ ಹೆಣ್ಣು ಮಕ್ಕಳು | | – 4 ಮಕ್ಕಳ ಪಾಲನಾ ಸಂಸ್ಥೆಗಳು |
| | ಒಟ್ಟು | **–23** ಮಕ್ಕಳ ಪಾಲನಾ ಸಂಸ್ಥೆಗಳು |

ಮೇಲಿನ ಉದಾಹರಣೆಯಂತೆ ಕ್ರಮಕೈಗೊಂಡಾಗ ತಿದ್ದುಪಡಿಯಾದ ನೋಂದಣಿ ಪ್ರಮಾಣ ಪತ್ರದಂತೆ ಒಂದು ಮಕ್ಕಳ ಪಾಲನಾ ಸಂಸ್ಥೆಗೆ ಅನುಮತಿಸಿದ ಲಿಂಗ ಮತ್ತು ವಯೋ ಗುಂಪನ್ನು ಹೊರತುಪಡಿಸಿ ಸದರಿ ಸಂಸ್ಥೆಯ ಹಳೆಯ ನೋಂದಣಿ ಪ್ರಮಾಣ ಪತ್ರದಂತೆ ಆ ಸಂಸ್ಥೆಗೆ ಸಂಬಂಧಪಟ್ಟ ಉಳಿದ ಮಕ್ಕಳನ್ನು ಆಯಾ ಮಕ್ಕಳ ಲಿಂಗ ಮತ್ತು ವಯೋ ಗುಂಪಿಗೆ ಸಂಬಂಧಪಟ್ಟ ಮಾನ್ಯತೆ ಪಡೆದ ಮಕ್ಕಳ ಪಾಲನಾ ಸಂಸ್ಥೆಗಳಿಗೆ ವರ್ಗಾಯಿಸುವುದು ಅವಶ್ಯಕವಾಗಿರುತ್ತದೆ. ಪ್ರಸ್ತುತ ಕೋವಿಡ್–19 ಹಿನ್ನೆಲೆಯಲ್ಲಿ ಗರಿಷ್ಠ ಸಂಖ್ಯೆಯ ಮಕ್ಕಳು ಮನೆಗೆ/ಕುಟುಂಬಗಳಿಗೆ ತೆರಳಿರುವುದರಿಂದ ಈ ಸಮಯದಲ್ಲಿ ಕಾನೂನಿನಂತೆ ಮಕ್ಕಳ ಪಾಲನಾ ಸಂಸ್ಥೆಗಳನ್ನು ಲಿಂಗವಾರು ಹಾಗೂ ವಯೋ ಗುಂಪಿನವಾರು ಪ್ರತ್ಯೇಕೀಕರಿಸಿ ಈ ಮಾರ್ಪಾಡನ್ನು ಅನುಷ್ಠಾನಗೊಳಿಸುವುದು ಸೂಕ್ತವಾಗಿರುತ್ತದೆ. ಶಾಲೆಗಳು ಪ್ರಾರಂಭವಾಗಿ ಮಕ್ಕಳು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಮರುಳುವ ಮುಂಚೆಯೇ ಪ್ರತಿಯೊಂದು ಜಿಲ್ಲೆಯಲ್ಲಿ ಮೇಲಿನ ಉದಾಹರಣೆಯಂತೆ ಮಕ್ಕಳ ಪಾಲನಾ ಸಂಸ್ಥೆಗಳ ವ್ಯವಸ್ಥಾಪಕರ ಮನವೊಲಿಸಿ ಮಕ್ಕಳ ಪಾಲನಾ ಸಂಸ್ಥೆಗಳ ಪ್ರಮಾಣ ಪತ್ರಗಳಿಗೆ ತಿದ್ದುಪಡಿಗಳನ್ನು ಪೂರ್ಣಗೊಳಿಸಿದ್ದಲ್ಲಿ ಕಾನೂನಿನ ನಿಬಂಧನೆಯಂತೆ ಮಕ್ಕಳಿಗೆ ಲಿಂಗವಾರು ಮತ್ತು ವಯೋ ಗುಂಪಿನ ವಾರು ಪ್ರತ್ಯೇಕ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಪಾಲನೆ ಮತ್ತು ರಕ್ಷಣೆಯನ್ನು ಒದಗಿಸಬೇಕಾದ ಇಲಾಖೆಯ ಜವಾಬ್ದಾರಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಬಹುದಾಗಿದೆ.

3. ಒಂದು ವೇಳೆ ಈ ಮೇಲಿನ ಉದಾಹರಣೆಯಂತೆ ಕ್ರಮಕೈಗೊಂಡ ನಂತರ ಸಹ ಯಾವುದಾದರೂ ಸರ್ಕಾರದ ಅನುದಾನ ಪಡೆಯದ ಖಾಸಗಿ ಮಕ್ಕಳ ಪಾಲನಾ ಸಂಸ್ಥೆಯು ಒಂದಕ್ಕಿಂತ ಹೆಚ್ಚಿನ ಲಿಂಗ ಅಥವಾ ವಯೋ ಗುಂಪಿನ ಮಕ್ಕಳಿಗೆ ಪಾಲನೆ ಮತ್ತು ರಕ್ಷಣೆ ಒದಗಿಸಲು ಇಚ್ಛಿಸಿದ್ದಲ್ಲಿ ಕಂಡಿಕೆ 6(ಇ)ರಂತೆ ಕ್ರಮವಹಿಸಬಹುದು.

**ಉದಾಹರಣೆಗೆ:**

BBB ಮಕ್ಕಳ ಪಾಲನಾ ಸಂಸ್ಥೆ ಪ್ರಸ್ತುತ ನೋಂದಣಿ ಪ್ರಮಾಣ ಪತ್ರದಲ್ಲಿ 6–18 ಗಂಡು ಮತ್ತು ಹೆಣ್ಣು ಮಕ್ಕಳಿಗೆ ಎಂದಿದ್ದಲ್ಲಿ ಸದರಿ ನೋಂದಣಿ ಪ್ರಮಾಣ ಪತ್ರಕ್ಕೆ 7–11 ಹೆಣ್ಣು ಮಕ್ಕಳು ಎಂದು ತಿದ್ದುಪಡಿ ಮಾಡಿಸಿಕೊಂಡು ನಂತರ ಸದರಿ ಸಂಸ್ಥೆ ಇಚ್ಛಿಸಿದ್ದಲ್ಲಿ ಹಾಗೂ ಅವಶ್ಯಕ ಕಟ್ಟಡ/ಕ್ಯಾಂಪಸ್ ಹಾಗೂ ಸಿಬ್ಬಂದಿ



Scanned with CamScanner

ಇತ್ಯಾದಿ ಸೌಲಭ್ಯಗಳನ್ನು ಪ್ರತ್ಯೇಕವಾಗಿ ಒದಗಿಸಲು ಸಿದ್ಧವಿದ್ದಲ್ಲಿ ಅದರಂತೆ ಉಳಿದ ವಿಂಗಡಣೆಗಳಿಗೆ (12–18 ಹೆಣ್ಣು ಮಕ್ಕಳು, 7–11 ಗಂಡು ಮಕ್ಕಳು, 12–18 ಗಂಡು ಮಕ್ಕಳು) ಹೊಸ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಪ್ರತ್ಯೇಕವಾದ ನೋಂದಣಿ ಪ್ರಮಾಣ ಪತ್ರಗಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಬಹುದು.

4. <u>ಜಿಲ್ಲೆಯಿಂದ ತಿದ್ದುಪಡಿ ಪ್ರಸ್ತಾವನೆಗಳನ್ನು ಕಳುಹಿಸುವ ಬಗ್ಗೆ</u>:– ಈ ಕೆಳಗೆ ಕೊಟ್ಟಿರುವ ನಮೂನೆಯನ್ನು ಭರ್ತಿಮಾಡಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ ಸಹಿಯೊಂದಿಗೆ ಮಾಹಿತಿಯನ್ನು ಸಲ್ಲಿಸಿದ್ದಲ್ಲಿ ಅಂತಹ ಪ್ರಸ್ತಾವನೆಗಳನ್ನು ನೋಂದಣಿ ಪ್ರಮಾಣ ಪತ್ರಗಳಿಗೆ ಅರ್ಹ ತಿದ್ದುಪಡಿ ಪ್ರಸ್ತಾವನೆಗಳೆಂದು ಪರಿಗಣಿಸಲಾಗುವುದು.

**ಉದಾಹರಣೆ:**

| ಕ್ರಮ. ಸಂ | ಮಕ್ಕಳ ಪಾಲನಾ ಸಂಸ್ಥೆ ಹೆಸರು | ನೋಂದಣಿ ಸಂಖ್ಯೆ | ನೋಂದಣಿ ಪ್ರಮಾಣ ಪತ್ರದಲ್ಲಿ ಪ್ರಸ್ತುತ ಇರುವ ವಿವರ | ನೋಂದಣಿ ಪ್ರಮಾಣ ಪತ್ರಕ್ಕೆ ತಿದ್ದುಪಡಿ ಪ್ರಸ್ತಾವನೆ | ನೋಂದಣಿ ಪ್ರಮಾಣ ಪತ್ರದ ತಿದ್ದುಪಡಿಗೆ ಸಂಸ್ಥೆಯ ಪ್ರಸ್ತಾವನೆ ಪತ್ರ ಲಗತ್ತಿಸಲಾಗಿದೆಯೇ ಹೌದು/ಇಲ್ಲ |
|---|---|---|---|---|---|
| 1 | 2 | 3 | 4 | 5 | 6 |
| 1 | AAA | KA56567 | 6-18 ವಯಸ್ಸಿನ ಗಂಡು ಮತ್ತು ಹೆಣ್ಣು ಮಕ್ಕಳು | 7-11 ವಯಸ್ಸಿನ ಗಂಡು ಮಕ್ಕಳು | ಹೌದು |
| 2 | BBB | KA56568 | 6-18 ವಯಸ್ಸಿನ ಗಂಡು ಮತ್ತು ಹೆಣ್ಣು ಮಕ್ಕಳು | 12-18ವಯಸ್ಸಿನ ಗಂಡು ಮಕ್ಕಳು | ಹೌದು |

ಸಹಿ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಸಹಿ
ಜಿಲ್ಲಾಧಿಕಾರಿಗಳು ಹಾಗೂಅಧ್ಯಕ್ಷರು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ

5. **ತಿದ್ದುಪಡಿ ಪ್ರಸ್ತಾವನೆಗಳಿಗೆ ಕೆಳಕಂಡ ವಿವರ/ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.**

1. ನೋಂದಣಿ ಪ್ರಮಾಣ ಪತ್ರದ ತಿದ್ದುಪಡಿಗೆ ಸಂಸ್ಥೆಯ ಪ್ರಸ್ತಾವನೆ
2. ಸಂಸ್ಥೆಯ ಪ್ರಸ್ತುತ ಮೂಲ ನೋಂದಣಿ ಪ್ರಮಾಣ ಪತ್ರ.
3. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ, 2015ರ ಕಲಂ 41ರಂತೆ ಸದರಿ ಮಕ್ಕಳ ಪಾಲನಾ ಸಂಸ್ಥೆಯ ಮಕ್ಕಳ ಸಾಮರ್ಥ್ಯ.
4. ಪ್ರಸ್ತಾಪಿತ ಮಕ್ಕಳ ಲಿಂಗ.
5. ಪ್ರಸ್ತಾಪಿತ ಮಕ್ಕಳ ವಯಸ್ಸು.
6. ತಿದ್ದುಪಡಿ ಪ್ರಸ್ತಾವನೆಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಪರಿಶೀಲಿಸಿ, ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ ಮುಖಾಂತರ ಕೇಂದ್ರ ಕಛೇರಿಗೆ ಕಳುಹಿಸುವುದು.

Scanned with CamScanner

6. ಒಂದು ವೇಳೆ ನೋಂದಣಿಯ ಕಾಲಾವಧಿ ಮುಗಿದಿದ್ದು ನವೀಕರಣಕ್ಕಾಗಿ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಕಛೇರಿಗೆ ಸಲ್ಲಿಸಿದ್ದಲ್ಲಿ ಅಂತಹ ಸಂಸ್ಥೆಗಳಿಗೆ ಕೂಡ ಉದಾಹರಣೆಯಲ್ಲಿ ಉಲ್ಲೇಖಿಸಿದಂತೆ ನಿಯಮ 29 ರನ್ವಯ 4 ವಿಂಗಡಣೆಗಳಲ್ಲಿ ಸಂಸ್ಥೆ ಆಯ್ಕೆ ಮಾಡಿಕೊಂಡ ಲಿಂಗ ಮತ್ತು ವಯಸ್ಸನ್ನು ಪರಿಗಣಿಸಿ ಅದರಂತೆ ನವೀಕರಣ ಪ್ರಸ್ತಾವನೆಯನ್ನು ಮರು ಸಲ್ಲಿಸುವುದು.

7. ಮೇಲಿನಂತೆ 4 ವಿಂಗಡಣೆಗಳಲ್ಲಿ ಯಾವ ವಿಂಗಡಣೆ ಬೇಕೋ ಅದನ್ನು ಆಯ್ಕೆ ಮಾಡಿಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯವನ್ನು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಒದಗಿಸುವುದು.

8. ಮೇಲಿನಂತೆ ಆಯಾಯ ಮಕ್ಕಳ ಪಾಲನಾ ಸಂಸ್ಥೆಗಳು ಲಿಂಗವಾರು ಹಾಗೂ ವಯಸ್ಸುವಾರು ಪ್ರತ್ಯೇಕವಾಗಿ ನೋಂದಣಿ ಮಾಡಿಸಬೇಕಾದ ಹಿನ್ನೆಲೆಯಲ್ಲಿ, ಸದರಿ ಸಂಸ್ಥೆಗಳಲ್ಲಿ **ಉಳಿಯಬಹುದಾದ ಲಿಂಗದ ಹಾಗೂ ವಯಸ್ಸಿನ ಮಕ್ಕಳ ಹೊಣೆಗಾರಿಕೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ್ದಾಗಿರುತ್ತದೆ.** ಅದರಂತೆ ಸದರಿ ಮಕ್ಕಳಿಗೆ, **ಮಕ್ಕಳ ಕಲ್ಯಾಣ ಸಮಿತಿಗಳಿಂದ ಸೂಕ್ತ ಆದೇಶ ಪಡೆದು,** ಆ ಮಕ್ಕಳಿಗೆ ಅನುಕೂಲವಾದ ಹಾಗೂ ಸೂಕ್ತ ಮೂಲಭೂತ ಸೌಕರ್ಯಗಳಿರುವ ಅವರ ಲಿಂಗ ಹಾಗೂ ವಯಸ್ಸಿಗೆ ನೋಂದಣಿ ಪಡೆದಿರುವ ಬೇರೊಂದು ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಪಾಲನೆ ಮತ್ತು ರಕ್ಷಣೆ ವ್ಯವಸ್ಥೆಯನ್ನು **ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕಲ್ಪಿಸತಕ್ಕದ್ದು.**

9. ಮಕ್ಕಳ ಪಾಲನಾ ಸಂಸ್ಥೆಗಳ ಈ ನೋಂದಣಿ ಪ್ರಮಾಣ ಪತ್ರಗಳ ತಿದ್ದುಪಡಿ ಹಾಗೂ ಹೊಸದಾಗಿ ನೋಂದಣಿ/ನವೀಕರಣ ಪ್ರಸ್ತಾವನೆಗಳನ್ನು ಸಲ್ಲಿಸುವುದು. ಪ್ರಸ್ತುತ ಕೋವಿಡ್ ಹಿನ್ನೆಲೆಯಲ್ಲಿ ಸುಮಾರು 30000 ಮಕ್ಕಳು ಮನೆಗೆ ತೆರಳಿರುವುದರಿಂದ ಹಾಗೂ ಈ ಮಕ್ಕಳು ಶಾಲಾ ಪ್ರಾರಂಭವಾಗುವವರೆಗೆ ವಾಪಸ್ಸು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಬರುವ ಅವಕಾಶಗಳು ಬಹಳ ವಿರಳವಾಗಿರುವುದರಿಂದ, ಶಾಲೆಗಳು ಪ್ರಾರಂಭವಾಗುವ ಮುಂಚಿತವಾಗಿಯೇ ನಿಯಮ 29ರಂತೆ ಕೈಗೊಳ್ಳಬೇಕಾದ ಎಲ್ಲಾ ಅವಶ್ಯಕ ಕ್ರಮಗಳನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕೈಗೊಳ್ಳತಕ್ಕದ್ದು.

10. ನಿಯಮ 29ರಂತೆ ಲಿಂಗವಾರು ಹಾಗೂ ವಯಸ್ಸುವಾರು ಪ್ರತ್ಯೇಕವಾಗಿ ಮಕ್ಕಳ ಪಾಲನಾ ಸಂಸ್ಥೆಗಳನ್ನು ಏರ್ಪಾಟು ಮಾಡಬೇಕಾದ ಈ ಪ್ರಯತ್ನದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಹಾಗೂ ಮಕ್ಕಳ ಕಲ್ಯಾಣ ಸಮಿತಿಗಳು ಒಗ್ಗಟ್ಟಿನಿಂದ ಪ್ರಯತ್ನ ಮಾಡತಕ್ಕದ್ದು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದವರು ಹಾಗೂ ಮಕ್ಕಳ ಕಲ್ಯಾಣ ಸಮಿತಿಗಳು ಆಯಾ ಜಿಲ್ಲೆಗಳಲ್ಲಿರುವ ಸರ್ಕಾರದ ಅನುದಾನ ಪಡೆಯುವ ಹಾಗೂ ಸರ್ಕಾರದ ಅನುದಾನ ಪಡೆಯದೇ ಇರುವ ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳೊಂದಿಗೆ ಸಮಾಲೋಚನಾ ಸಭೆಗಳನ್ನು ನಡೆಸಿ, ನಿಯಮ 29ಅನ್ನು ಅನುಷ್ಠಾನ ಮಾಡುವುದರಿಂದ, ಮಕ್ಕಳ ಮೇಲೆ ಆಗುವ ದೈಹಿಕ, ಲೈಂಗಿಕ ಹಾಗೂ ಮಾನಸಿಕ ದಾಳಿ/ಹಿಂಸೆಯನ್ನು ತಪ್ಪಿಸುವುದರೊಂದಿಗೆ ಮಕ್ಕಳ ಆರೈಕೆಯಲ್ಲಿ ಸಾಧಿಸಬಹುದಾದ ಗಮನಾರ್ಹ ಗುಣಮಟ್ಟದ ಏರಿಕೆಯ ಬಗ್ಗೆ ಅವರಿಗೆ ಅರಿವು ಮೂಡಿಸುವುದು ಹಾಗೂ ಇದರಿಂದ ಯಾವುದೇ ಒಂದು ಮಕ್ಕಳ ಪಾಲನಾ ಸಂಸ್ಥೆಯನ್ನು ರದ್ದುಮಾಡುವ ಅವಶ್ಯಕತೆ ಇರುವುದಿಲ್ಲವೆಂದು ಹಾಗೂ ಕೇವಲ ಮಕ್ಕಳನ್ನು ದಾಖಲಿಸುವ/ಪ್ಲೇಸ್‌ಮೆಂಟ್ ಪ್ರಕ್ರಿಯೆಯಲ್ಲಿ ಮಾತ್ರ ಬದಲಾವಣೆ ಆಗುತ್ತದೆ ಎಂದು ಅವರಿಗೆ ಮನವರಿಕೆ ಮಾಡುವುದು. ಈ ರೀತಿಯಾಗಿ ನಿಯಮ 29ರ ಅನುಷ್ಠಾನವನ್ನು ಇಲಾಖೆ/ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಕಲ್ಯಾಣ ಸಮಿತಿ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಹೊಂದಾಣಿಕೆಯೊಂದಿಗೆ ಶಾಂತಿಯುತ ವಾತಾವರಣದಲ್ಲಿ ಮಾಡಬಹುದಾಗಿದೆ.

11. ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015 ಕಲಂ 41(2)ರಲ್ಲಿ ಕೇವಲ 6 ಬಗೆಗಿನ ಅಂದರೆ 1. ಬಾಲಮಂದಿರಗಳು 2. ತೆರೆದತಂಗುದಾಣ 3. ವಿಶೇಷ ದತ್ತು ಸಂಸ್ಥೆ 4. ವೀಕ್ಷಣಾಲಯ 5. ಸ್ಪೆಷಲ್ ಹೋಮ್ ಮತ್ತು 6. ಪ್ಲೇಸ್ ಆಫ್ ಸೇಫ್ಟಿ ಮಕ್ಕಳ ಪಾಲನೆ ಸಂಸ್ಥೆಗಳಿಗೆ ಮಾತ್ರ ನೋಂದಣಿಗೆ ಅವಕಾಶವಿರುತ್ತದೆ. ಆದರೆ ನವೀಕರಣಕ್ಕೆ ಬರುತ್ತಿರುವ ಹಲವಾರು ಪ್ರಸ್ತಾವನೆಗಳಲ್ಲಿ ಹಳೆಯ ನೋಂದಣಿ ಪ್ರಮಾಣ ಪತ್ರಗಳಲ್ಲಿರುವಂತೆ ಅನಾಥಾಶ್ರಮ, ನಿರ್ಗತಿಕ ಮಕ್ಕಳ ಕುಟೀರ ಇತ್ಯಾದಿ ಬಗೆಗಿನ ಮಕ್ಕಳ ಪಾಲನಾ ಸಂಸ್ಥೆಗಳ ಬಗೆಯಲ್ಲಿಯೇ ನವೀಕರಣ ಪ್ರಸ್ತಾವನೆಗಳನ್ನು ಕಳುಹಿಸುತ್ತಿರುವುದನ್ನು ಗಮನಿಸಲಾಗಿದೆ. ಇಂತಹ



Scanned with CamScanner

ಸಂಸ್ಥೆಗಳ ನವೀಕರಣ ಪ್ರಸ್ತಾವನೆಗಳನ್ನು ಕಳುಹಿಸುವಾಗ ಕಲಂ 41(2)ರಡಿಯಲ್ಲಿ ಉಲ್ಲೇಖಿಸಲಾದ ಸೂಕ್ತ ಮಕ್ಕಳ ಪಾಲನಾ ಸಂಸ್ಥೆಯ ಬಗೆಯನ್ನು (Type of CCIs) ನಮೂದಿಸಿ ನವೀಕರಣ ಶಿಫಾರಸ್ಸನ್ನು ಕಳುಹಿಸುವುದು.

12. ಜಿಲ್ಲೆಯಲ್ಲಿರುವ ಯಾವುದಾದರೂ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015ರ ಕಲಂ 2(14)ರಲ್ಲಿ ಸ್ಪಷ್ಟಪಡಿಸಿದ ಪಾಲನೆ ಮತ್ತು ರಕ್ಷಣೆ ಅವಶ್ಯಕತೆಯಿರುವ ಮಕ್ಕಳು ಇರುವುದಿಲ್ಲವೆಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಭಾವಿಸಿದಲ್ಲಿ ಇದನ್ನು ಕಲಂ 41(9)ರಂತೆ ಹಾಗೂ ಕಲಂ 54ರಂತೆ ಜಿಲ್ಲಾ ತನಿಖಾ ಸಮಿತಿ ವತಿಯಿಂದ <u>ಪ್ರತಿಯೊಂದು ಮಗುವಾರು</u> ವಿವರವಾದ ತನಿಖೆಯನ್ನು ನಡೆಸಿ ಖಚಿತಪಡಿಸಿಕೊಳ್ಳಬೇಕಾಗುತ್ತದೆ. ಒಂದು ಸಂಸ್ಥೆಯಲ್ಲಿ ಪಾಲನೆ ಮತ್ತು ರಕ್ಷಣೆ ಅವಶ್ಯವಿಲ್ಲದ ಮಕ್ಕಳಿದ್ದು ಸದರಿ ಸಂಸ್ಥೆಯಲ್ಲಿ ಮೇಲಿನಂತೆ ತನಿಖೆ ಮಾಡಿದಾಗ ಒಂದು ವೇಳೆ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಒಂದೇ ಮಗು ಕಂಡುಬಂದರೂ ಸಹ ಸದರಿ ಸಂಸ್ಥೆಯನ್ನು ಕೂಡಾ ಕಲಂ 41ರಡಿಯಲ್ಲಿ ನೋಂದಣಿ ಮಾಡಬೇಕಾಗಿರುತ್ತದೆ ಅಥವಾ ನೋಂದಣಿಯನ್ನು ಮುಂದುವರೆಸಬೇಕಾಗಿರುತ್ತದೆ. ಒಂದು ವೇಳೆ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಒಂದು ಮಗು ಸಹ ಜಿಲ್ಲಾ ತನಿಖಾ ಸಮಿತಿ ವರದಿಯಂತೆ ಸಂಸ್ಥೆಯಲ್ಲಿ ಇಲ್ಲದಿದ್ದಲ್ಲಿ ಹಾಗೂ ಭವಿಷ್ಯದಲ್ಲಿ ಸಹ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳು ಸದರಿ ಸಂಸ್ಥೆಯಲ್ಲಿ ದಾಖಲಾಗುವ ಅವಕಾಶವಿಲ್ಲದಿದ್ದಲ್ಲಿ ಅಂತಹ ಸಂಸ್ಥೆಗಳ <u>ನೋಂದಣಿಯನ್ನು ರದ್ದುಪಡಿಸಲು</u> ನಮೂನೆ 46ರಲ್ಲಿ ಜಿಲ್ಲಾ ತನಿಖಾ ಸಮಿತಿಯ ವರದಿಯೊಂದಿಗೆ ಹಾಗೂ ಜಿಲ್ಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಕಳುಹಿಸಬಹುದು.

13. ಮೇಲಿನಂತೆ ನಿಯಮ 29 ರನ್ನು ಅನುಷ್ಠಾನ ಮಾಡಲು ಲಿಂಗವಾರು ಹಾಗೂ ವಯಸ್ಸುವಾರು ಪ್ರತ್ಯೇಕ ಬಾಲಮಂದಿರ/ಮಕ್ಕಳ ಪಾಲನಾ ಸಂಸ್ಥೆಗಳನ್ನು ನಿರ್ವಹಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ನೀಡಿದ ನಿರ್ದೇಶನಗಳು ವಿಶೇಷ ಅಗತ್ಯವುಳ್ಳ ಮಕ್ಕಳ ಪಾಲನಾ ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತವೆ. ಅದರಂತೆ ಬುದ್ಧಿಮಾಂದ್ಯ, ಮತ್ತು ವಿಕಲಚೇತನ ಮಕ್ಕಳ ಪಾಲನಾ ಸಂಸ್ಥೆಗಳಿಗೂ ಕೆಳಕಂಡ 4 ಬಗೆಗಿನ ಲಿಂಗ ಮತ್ತು ವಯೋ ಗುಂಪಿನಲ್ಲಿ ಆಯ್ಕೆ ಮಾಡಿಕೊಂಡ ವಿಂಗಡಣೆಯಂತೆ ನೋಂದಣಿ ಪ್ರಮಾಣ ಪತ್ರಕ್ಕೆ ತಿದ್ದುಪಡಿ ಮಾಡಿಸಲು ಅಥವಾ ಹೊಸದಾಗಿ ನೋಂದಣಿ ಪ್ರಮಾಣ ಪತ್ರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

1. ಬುದ್ಧಿಮಾಂದ್ಯ/ವಿಶೇಷ ಅಗತ್ಯವುಳ್ಳ ಜ್ಯೂನಿಯರ್ ಗಂಡು(7-11) ಮಕ್ಕಳ ಬಾಲಮಂದಿರ
2. ಬುದ್ಧಿಮಾಂದ್ಯ/ವಿಶೇಷ ಅಗತ್ಯವುಳ್ಳ ಸೀನಿಯರ್ ಗಂಡು(12-18) ಮಕ್ಕಳ ಬಾಲಮಂದಿರ
3. ಬುದ್ಧಿಮಾಂದ್ಯ/ವಿಶೇಷ ಅಗತ್ಯವುಳ್ಳ ಜ್ಯೂನಿಯರ್ ಹೆಣ್ಣು(7-11) ಮಕ್ಕಳ ಬಾಲಮಂದಿರ
4. ಬುದ್ಧಿಮಾಂದ್ಯ/ವಿಶೇಷ ಅಗತ್ಯವುಳ್ಳ ಸೀನಿಯರ್ ಹೆಣ್ಣು(12-18) ಮಕ್ಕಳ ಬಾಲಮಂದಿರ

14. ಮೇಲಿನಂತೆ ನಿಯಮ 29 ರನ್ನು ಅನುಷ್ಠಾನ ಮಾಡಲು ಲಿಂಗವಾರು ಹಾಗೂ ವಯಸ್ಸುವಾರು ಪ್ರತ್ಯೇಕ ಬಾಲಮಂದಿರ/ಮಕ್ಕಳ ಪಾಲನಾ ಸಂಸ್ಥೆಗಳನ್ನು ನಿರ್ವಹಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ನೀಡಿದ ನಿರ್ದೇಶನಗಳು ಇಂಟರ್-ಸೆಕ್ಸ್ಯುಯಲ್/ಟ್ರಾನ್ಸ್ ಝುಂಡರ್ ಮಕ್ಕಳ ಪಾಲನಾ ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತವೆ. ಅದರಂತೆ ಇಂಟರ್-ಸೆಕ್ಸ್ಯುಯಲ್/ಟ್ರಾನ್ಸ್ ಝುಂಡರ್ ಮಕ್ಕಳ ಪಾಲನಾ ಸಂಸ್ಥೆಗಳಿಗೂ ಕೆಳಕಂಡ 4 ಬಗೆಗಿನ ಲಿಂಗ ಮತ್ತು ವಯೋ ಗುಂಪಿನಲ್ಲಿ ಆಯ್ಕೆ ಮಾಡಿಕೊಂಡ ವಿಂಗಡಣೆಯಂತೆ ನೋಂದಣಿ ಪ್ರಮಾಣ ಪತ್ರಕ್ಕೆ ತಿದ್ದುಪಡಿ ಮಾಡಿಸಲು ಅಥವಾ ಹೊಸದಾಗಿ ನೋಂದಣಿ ಪ್ರಮಾಣ ಪತ್ರಕ್ಕೆ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳುವುದು.

Scanned with CamScanner

1. ಇಂಟರ್-ಸೆಕ್ಸ್ಯುಯಲ್/ಟ್ರಾನ್ಸ್ ಝುಂಡರ್ ಜ್ಯೂನಿಯರ್ ಗಂಡು(7-11) ಮಕ್ಕಳ ಬಾಲಮಂದಿರ
2. ಇಂಟರ್-ಸೆಕ್ಸ್ಯುಯಲ್/ಟ್ರಾನ್ಸ್ ಝುಂಡರ್ ಸೀನಿಯರ್ ಗಂಡು(12-18) ಮಕ್ಕಳ ಬಾಲಮಂದಿರ
3. ಇಂಟರ್-ಸೆಕ್ಸ್ಯುಯಲ್/ಟ್ರಾನ್ಸ್ ಝುಂಡರ್ ಜ್ಯೂನಿಯರ್ ಹೆಣ್ಣು(7-11) ಮಕ್ಕಳ ಬಾಲಮಂದಿರ
4. ಇಂಟರ್-ಸೆಕ್ಸ್ಯುಯಲ್/ಟ್ರಾನ್ಸ್ ಝುಂಡರ್ ಸೀನಿಯರ್ ಹೆಣ್ಣು(12-18) ಮಕ್ಕಳ ಬಾಲಮಂದಿರ

15. ಸ್ವಾಧಾರ ಹಾಗೂ ಶಿಕ್ಷಣ ಇಲಾಖೆಯ ಚಿಣ್ಣರ ತಂಗುದಾಣ ಕಾರ್ಯಕ್ರಮದ ಅಡಿಯಲ್ಲಿನ ಸ್ವಯಂ ಸೇವಾ ಸಂಸ್ಥೆಗಳನ್ನು ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ,2015ರ ಅಡಿಯಲ್ಲಿ ನೋಂದಾಯಿಸಲು ಬಾರದೆ ಇರುವುದರಿಂದ ಇಂತಹ ಪ್ರಸ್ತಾವನೆಗಳನ್ನು ನೋಂದಣಿ ಅಥವಾ ನವೀಕರಣಕ್ಕಾಗಿ ಕೇಂದ್ರ ಕಛೇರಿಗೆ ಕಳುಹಿಸುವ ಅವಶ್ಯಕತೆ ಇರುವುದಿಲ್ಲ ಎಂದು ಸೂಚಿಸಿದೆ.

29.08.2020
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

**ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,**
**ಜಿಲ್ಲಾ ಮಕ್ಕಳ ರಕ್ಷಣಾ ಘಟಕ,**
**30 ಜಿಲ್ಲೆಗಳು.**

Scanned with CamScanner